## ಪಶ್ಚಿಮ ವಲಯ ವ್ಯಾಪ್ತಿಯ, ಮಲ್ಲೇಶ್ವರಂ ಉಪವಿಭಾಗದ ಕಾಡುಮಲ್ಲೇಶ್ವರ ವಾರ್ಡ್-65ರಲ್ಲಿ ಆನ್‌ಲೈನ್ (Zoom App) ಮೂಲಕ ದಿನಾಂಕ: 26-08-2021 ರಂದು, ನಡೆದ ವಾರ್ಡ್ ಸಮಿತಿ ಸಭೆಯ

### ಸಭಾ ನಡವಳಿಗಳು.

ವಾರ್ಡ್ ಸಂಖ್ಯೆ-65 ಕಾಡುಮಲ್ಲೇಶ್ವರ

ಸಮಯ ಬೆಳಿಗ್ಗೆ 11:00 ಘಂಟೆಗೆ

ದಿನಾಂಕ: 26-08-2021 ರಂದು ವಾರ್ಡ್ ಸಂಖ್ಯೆ:65ರ ಆಗಸ್ಟ್ ಮಾಹೆಯ ವಾರ್ಡ್ ಸಮಿತಿ ಸಭೆಯು ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಆನ್‌ಲೈನ್ (Zoom App) ಮೂಲಕ ಭಾಗವಹಿಸಿದ್ದರು. ವಾರ್ಡ್ ಸಂಖ್ಯೆ: 65ರ ಸಹಾಯಕ ಅಭಿಯಂತರರು ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದು ಎಲ್ಲರಿಗೂ ಸ್ವಾಗತವನ್ನು ಕೋರಿದರು ಹಾಗೂ ಸದಸ್ಯರುಗಳೆಲ್ಲರ ಕಿರು ವಿವರ ತಿಳಿಸಿ, ಮಾಸ್ಕ್ ಧರಿಸಿ ಸಾಮಾಜಿಕ ಅಂತರ ಕಾಯ್ದುಕೊಂಡು ಸಭೆ ನಡೆಸಲು ಕೋರಿದರು.

ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

- ಗಾಂಧಿಗ್ರಾಮ ಆರೋಗ್ಯ ಕೇಂದ್ರದ ವೈದ್ಯರುಗಳಾದ ಡಾ//ಲಾವಣ್ಯ ಸಭೆಯಲ್ಲಿ ಹಾಜರಿದ್ದು, ಆರೋಗ್ಯ ಕೇಂದ್ರದಲ್ಲಿ 45 ವರ್ಷ ಮೇಲ್ಪಟ್ಟವರ ಕೋವಿಡ್ ಶಿಲ್ಡ್ ಪ್ರತಿದಿನ ನೀಡುತ್ತಿದ್ದು, ಎನ್.ಜಿ.ಓಸ್‌ಗಳು ಸಮರ್ಪಕವಾಗಿ ಸಾರ್ವಜನಿಕರಿಗೆ ಮಾರ್ಗದರ್ಶನ ನೀಡುತ್ತಿರುತ್ತಾರೆಂದು, ಪ್ರತಿದಿನದ ವ್ಯಾಕ್ಸಿನ್ ಬಗ್ಗೆ ಗ್ರೂಪಿನಲ್ಲಿ ಮಾಹಿತಿ ನೀಡುತ್ತಿರುವುದಾಗಿ ಸಭೆಗೆ ತಿಳಿಸಿರುತ್ತಾರೆ. ಹಾಗೂ ಡೆಲ್ಟಾ ಕೇಸಸ್‌ನ ಬಗ್ಗೆ ಪರೀಕ್ಷಿಸಿ ಹಾಗೂ ಮಕ್ಕಳಿಗೆ ಮೂರನೇ ಅಲೆಯ ಸೂಚನೆಗಳಿದ್ದು, ಈಗಾಗಲೇ ಕ್ರಮಕೈಗೊಂಡಿರುವುದಾಗಿ ತಿಳಿಸಿರುತ್ತಾರೆ. ಮತ್ತು ವಾರ್ಡ್-65ಕ್ಕೆ ಸಂಬಂಧಿಸಿದಂತೆ 6 ಜನರಿಗೆ ಕೋವಿಡ್-19 ಸೋಂಕು ತಗುಲಿದ್ದು, ಅದರಲ್ಲಿ 4 ಜನಕ್ಕೆ ಹೋಂ ಕ್ವಾರೇಂಟೈನ್ ಮತ್ತು ಇಬ್ಬರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುತ್ತಾರೆಂದು ಸಭೆಗೆ ತಿಳಿಸಿರುತ್ತಾರೆ.
- ವೈದ್ಯರುಗಳಾದ ಡಾ//ಲಾವಣ್ಯ ರವರು ವಯಸ್ಸಾದರು ಆಸ್ಪತ್ರೆಗೆ ಹೋಗಲು ಸಾಧ್ಯವಾಗದಂತವರಿಗೆ ವಿಳಾಸ ನೀಡಿದ್ದಲ್ಲಿ ಮನೆಗೆ ತೆರಳಿ ಲಸಿಕೆ ನೀಡುವುದಾಗಿ ತಿಳಿಸಿರುತ್ತಾರೆ.
- ಆರೋಗ್ಯ ಇಲಾಖೆಯ ಕಿರಿಯ ಆರೋಗ್ಯ ಪರಿವೀಕ್ಷರಾದ ಶ್ರೀ ವೆಂಕಟೇಶ್ ರವರು ಸಭೆಯಲ್ಲಿ ಹಾಜರಿದ್ದು, ಸಾರ್ವಜನಿಕರು ಕೇಳಿದ್ದ ಸಮಸ್ಯೆಗಳಿಗೆ ಉತ್ತರಿಸಿರುತ್ತಾರೆ.
- ಆರೋಗ್ಯ ವೈದ್ಯಾಧಿಕಾರಿ (ಮಲ್ಲೇಶ್ವರಂ) ರವರಾದ ಡಾ// ಸುಚಿತ್ರ ರವರು ಸಭೆಯಲ್ಲಿ ಹಾಜರಿದ್ದು, ಶಾಲೆಗಳು ಪ್ರಾರಂಭವಾಗಿರುವುದರಿಂದ ಶಾಲೆಗಳಲ್ಲಿ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಮಾಹಿತಿಯನ್ನು ನೀಡಿರುತ್ತಾರೆ. ಹಾಗೂ ದಿನಾಂಕ: 27-08-2021 ರಂದು ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರದ ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಲಸಿಕೆ ಮೇಳ ಇರುವುದರಿಂದ ಸಾರ್ವಜನಿಕರು ಲಸಿಕೆ ಪಡಿಯಬಹುದಾಗಿದೆ ಎಂದು ಸಭೆಗೆ ತಿಳಿಸಿದರು.

- ಪಶು ಸಂಗೋಪನಾ ಇಲಾಖೆ ಅಧಿಕಾರಿಗಳಾದ ಶ್ರೀ ನಾಗೇಶ್ ಸಭೆಯಲ್ಲಿ ಹಾಜರಿದ್ದು, ಬೀದಿ ನಾಯಿಗಳ ಬಗ್ಗೆ ಸಭೆಗೆ ಕುಲಂಕುಶವಾಗಿ ತಿಳಿಸಿರುತ್ತಾರೆ.
- ಗೇಲ್ ಗ್ಯಾಸ್ ಕಂಪನಿಯರಾದ ಶ್ರೀ ಮಲ್ಲಪ್ಪನವರು ಸಭೆಯಲ್ಲಿ ಹಾಜರಿದ್ದು, ಗ್ಯಾಸ್ ಕೇಬಲ್‌ಗಳ ಬಗ್ಗೆ ತಿಳಿಸಿದ್ದು, ಮನೆ ಮನೆಗೆ ಗ್ಯಾಸ್ ಅಳವಡಿಸುವ ಬಗ್ಗೆ ಸಾರ್ವಜನಿಕರು ಕೇಳಿರುತ್ತಾರೆ. ಇದಕ್ಕೆ ಟೆಂಡರ್ ಕರೆದಿರುತ್ತಾರೆ ಎಂದು ತಿಳಿಸಿ ಟೆಂಡರ್ ಪ್ರಕ್ರಿಯೆ ಮುಗಿದ ನಂತರ ಮನೆ ಮನೆಗೆ ಗ್ಯಾಸ್ ಅಳವಡಿಸುವುದಾಗಿ ಸಭೆಗೆ ತಿಳಿಸಿದರು. ಮತ್ತು ದೇವಸ್ಥಾನ ರಸ್ತೆಗಳಲ್ಲಿ ತೊಡಿರುವ ಗುಂಡಿಗಳನ್ನು ಮುಚ್ಚಿಸಿರುವುದಾಗಿ ತಿಳಿಸಿರುತ್ತಾರೆ.
- ವಾರ್ಡ್-65ರಲ್ಲಿ ಏರ್‌ಟೆಲ್ ಕಾಮಗಾರಿ ನಡೆಯುತ್ತಿದ್ದು ಗುತ್ತಿಗೆದಾರರಾದ ಶ್ರೀ ವಿಕಾಸ್ ಸಭೆಯಲ್ಲಿ ಹಾಜರಿದ್ದು, ಸಭೆಯಲ್ಲಿ ಕೇಳಲಾದ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸುತ್ತಾ, ಒಂದು ತಿಂಗಳೊಲಗಾಗಿ ಬಿದ್ದಿರು ಗುಂಡಿಗಳನ್ನು ಸರಿಪಡಿಸಲಾಗುವುದೆಂದು ಸಭೆಗೆ ತಿಳಿಸಿದರು.
- ಶ್ರೀ ರಾಮಮೂರ್ತಿಯವರು ಸಭೆಯಲ್ಲಿ ಹಾಜರಿದ್ದು 15ನೇ ಅಡ್ಡರಸ್ತೆಯಲ್ಲಿ ಬೆಸ್ಕಾಂ ಇಲಾಖೆಯಿಂದ ಭೂಗತ ಕೇಬಲ್ ಅಳವಡಿಸುವುದರಿಂದ ಯಾವುದೇ ಕಾಮಗಾರಿಯು ಕೈಗೊಳ್ಳುವುದು ಬೇಡವೆಂದು ಸಭೆಗೆ ಕೋರಿರುತ್ತಾರೆ. ಅದರಂತೆ ಸದರಿ ರಸ್ತೆಯಲ್ಲಿ ಯಾವುದೇ ಕಾಮಗಾರಿಯನ್ನು ಕೈಗೊಳ್ಳುವುದಿಲ್ಲವೆಂದು ವಾರ್ಡ್ ಸಹಾಯಕ ಅಭಿಯಂತರರು ಸಭೆಗೆ ತಿಳಿಸಿರುತ್ತಾರೆ.
- ಮಾರ್ಗೋಸಾ ರಸ್ತೆಯ ಬಗ್ಗೆ ಸಭೆಯಲ್ಲಿ ಕೇಳಿದ ಪ್ರಶ್ನೆಗಳಿಗೆ ಟೆಂಡರ್ ಸ್ಯೂರ್ ರಸ್ತೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು ಶ್ರಿ ನಾಗರಾಜ್ ರವರು ಸಭೆಯಲ್ಲಿ ಹಾಜರಿದ್ದು ಬೆಸ್ಕಾಂ ಇಲಾಖೆಯವರು ಕಾಮಗಾರಿಯನ್ನು ಪೂರ್ಣಗೊಳಿಸಿದ ನಂತರ ಪಾದಚಾರಿ ಮಾರ್ಗ 11ನೇ ಮತ್ತು 12ನೇ ಅಡ್ಡರಸ್ತೆಗಳಲ್ಲಿ ಸರಿಪಡಿಸುವುದಾಗಿ ಹಾಗೂ ಮುಂದಿನ ಬುಧವಾರದಂತೆ ಬೆಳಗ್ಗೆ 11:00ಗೆ ಸಾರ್ವಜನಿಕರು ಸೇರಿ ರಸ್ತೆಯನ್ನು ಪರಿವೀಕ್ಷಣೆ ಮಾಡುವುದಾಗಿ ಸಭೆಗೆ ತಿಳಿಸಿದರು.
- ಬೆಸ್ಕಾಂ ಇಲಾಖೆಯವರಾದ ಶ್ರೀ ಮಂಜುನಾಥ್ ರವರು ಸಭೆಯಲ್ಲಿ ಹಾಜರಿದ್ದು, ಕೇಬಲ್‌ಗಳ ಅಳವಡಿಸಲು ತೆಗೆದಿರುವ ಗುಂಡಿಗಳನ್ನು ಮುಚ್ಚಿ ಡೆಬ್ರಿಸ್ ತೆರವುಗೊಳಿಸುವುದಾಗಿ ಸಭೆಗೆ ತಿಳಿಸಿರುತ್ತಾರೆ.
- ನೋಡಲ್ ಅಧಿಕಾರಿಯವರಾದ ಶ್ರೀ ಇಂದ್ರಕುಮಾರ್ ರವರ ಜೊತೆಯಲ್ಲಿ ಮುಂದಿನ ದಿನಾಂಕದಂದು ಆರೋಗ್ಯ ವೈದ್ಯಾಧಿಕಾರಿಗಳು, ಸಂಚಾರಿ ಪೊಲೀಸ್ ಅಧಿಕಾರಿಗಳು, ಮಾರ್ಷಲ್‌ಗಳು ಸಭೆ ಸೇರಿ ಕೋವಿಡ್-19 ಮಾರ್ಗಸೂಚಿಗಳನ್ನು ಕೈಗೊಳ್ಳುವ ಬಗ್ಗೆ ಚರ್ಚಿಸಬೇಕೆಂದು ತಿಳಿಸಿರುತ್ತಾರೆ.
- ನೋಡಲ್ ಅಧಿಕಾರಿಯವರಾದ ಶ್ರೀ ಇಂದ್ರಕುಮಾರ್ ರವರು ಸಭೆಗೆ ಗೈರುಹಾಜರಾದ ಬಿ.ಡಬ್ಲ್ಯೂ.ಎಸ್.ಎಸ್.ಬಿ, ಪೊಲೀಸ್ ಸಂಚಾರಿ, ಕಾನೂನು ಸುವ್ಯವಸ್ಥೆ ಮತ್ತು ಬೀದಿ ದೀಪದವರಿಗೆ ನೋಟಿಸ್ ನೀಡಬೇಕೆಂದು ಸಹಾಯಕ ಅಭಿಯಂತರರಿಗೆ ತಿಳಿಸರುತ್ತಾರೆ.

ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಕಾರ್ಯದರ್ಶಿಯವರು ವಂದಾನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ಕಾರ್ಯದರ್ಶಿ,

(signature) 26/8/21

ಸಹಾಯಕ ಅಭಿಯಂತರರು, ವಾರ್ಡ್-65
ಮಲ್ಲೇಶ್ವರಂ ಉಪ ವಿಭಾಗ, ಬಿಬಿಎಂಪಿ